# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 107 /2024

ಸಿಡಬ್ಲ್ಯೂಃ 3 ಪಿಡಬ್ಲ್ಯೂಃ 1

| | |
|---|---|
| ಹೆಸರುಃ | ಮಲ್ಲಿಕಾ ಕುಮಾರ ನಾಯರ್ |
| ಗಂಡನ ಹೆಸರುಃ | ಕುಮಾರ ನಾಯರ್ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಗೃಹಿಣಿ |
| ವಾಸಃ | ಮಂಡ್ಲಿಕೊಪ್ಪ, ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 17-01-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಸುಮಾರು 7-8 ತಿಂಗಳ ಹಿಂದೆ ನಾನು ಬೆಂಗಳೂರಿಗೆ ಹೋಗಲು ತಾಳಗುಪ್ಪ ರೈಲು ನಿಲ್ದಾಣಕ್ಕೆ ಹೋಗಲು ಮಂಡ್ಲಿಕೊಪ್ಪ ಬಸ್ ನಿಲ್ದಾಣ ದ ಬಳಿ ನಿಂತಿದ್ದಾಗ, ಪೊಲೀಸರು ಬಂದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಹಿಯನ್ನು ಯಾವ ಕಾರಣಕ್ಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಕಡತದಲ್ಲಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ-1 ಮತ್ತು ಸಹಿಯನ್ನು ನಿ.ಪಿ-ನಿ.ಪಿ-1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಕಚ್ಚಾ ಹಾತನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ಹಾತನಕಾಶೆಯನ್ನು ನಿ.ಪಿ-2 ಮತ್ತು ನಿ.ಪಿ-2 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ನಾಲ್ಕು ಭಾವಚಿತ್ರಗಳನ್ನು ನೋಡಿ, ಅದರಲ್ಲಿ ತನ್ನನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-3 ರಿಂದ ನಿ.ಪಿ-6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ**

ಸಾಕ್ಷಿಗೆ ನಿ.ಪಿ-3 ರಿಂದ 6 ನ್ನು ಭಾವಚಿತ್ರವನ್ನು ತೋರಿಸಲಾಗಿ ಅವುಗಳನ್ನು ಎಲ್ಲಿ ತೆಗೆಯಲಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಚಾಸಾ-1 ರವರ ಮನೆಯ ಬಳಿ ತೆಗೆದಿರುತ್ತಾರೆ ಹಾಗೂ ಸದರಿ ಜಾಗವನ್ನು ಚಾಸಾ-1 ರವರು ತೋರಿಸುತ್ತಿದ್ದರು ಎಂದು ಉತ್ತರಿಸುತ್ತಾರೆ. ಯಾವ ಕಾರಣಕ್ಕಾಗಿ ಅವರು ಜಾಗವನ್ನು ತೋರಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನಾನು ಪಂಚನಾಮೆಯಾದ ನಂತರ ಚಾಸಾ-1 ರವರಿಗೆ ಕೇಳಿದಾಗ, ಅವರು ಅವರ ತಮ್ಮನೊಂದಿಗೆ ಜಗಳ ಮಾಡಿದ ವಿಚಾರವಾಗಿ ಪಂಚನಾಮೆಯನ್ನು ಮಾಡಲಾಯಿತು ಎಂದು ನನಗೆ ತಿಳಿಸಿರುತ್ತಾರೆ.

ದಿಃ 01-03-2024 ಸಂಜೆ 4-30 ರಿಂದ 5-30 ವರೆಗೆ ನಿಮ್ಮ ಹಾಗೂ ಚಾಸಾ-2 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಲಾಗಿ ನೀವು ಹೇಳಿದಂತೆ ನಿ.ಪಿ-1 ಪಂಚನಾಮೆ ಹಾಗೂ ನಿ.ಪಿ-2 ಕಚ್ಚಾ ಹಾತ ನಕಾಶೆಯನ್ನು ಬರೆಯಲಾಗಿ ಅದಕ್ಕೆ ನೀವು ಸಹಿ ಮಾಡಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಅದೇರೀತಿ ನಿಮ್ಮ ಸಮಕ್ಷಮ ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ಜಪ್ತುಪಡಿಸಿಕೊಂಡಿದ್ದರು ಸಹಿತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ನೋಡಿ ಭಾವಚಿತ್ರದಲ್ಲಿ ಇರುವ ಕಟ್ಟಿಗೆ ಬಡಿಗೆ ಇದೆ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಬಡಿಗೆಯನ್ನು ಗುರುತಿಸಿದ ಕಾರಣ ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಜಿ ಎನ್ ವಕೀಲರಿಂದಃ**

ನಾನು ಪಂಚನಾಮೆಯಾದ 15 ದಿವಸಗಳ ನಂತರ ದೂರವಾಣಿ ಮುಖಾಂತರ ಕೇಳಿದಾಗ ಗಲಾಟೆಯ ವಿಷಯ ತಿಳಿಯಿತು. ಮು.ಮಾ-1 ಬಡಿಗೆಯನ್ನು ಪೋಲೀಸರು ನನ್ನ ಸಮಕ್ಷಮ ಜಪ್ತುಪಡಿಸಿಕೊಂಡಿರುವುದಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**